**<u>ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ. ಎಲ್ ಎ ವಕೀಲರಿಂದಃ-</u>**

1. ವಾದಿಯು ಯಾವ ಯಾವ ಸರ್ವೇ ನಂಬರ್ ಗೆ ದಾವೆ ಮಾಡಿದ್ದಾರೆ ಗೊತ್ತಾ ಎಂದರೆ ಸಾಕ್ಷಿ ಸರ್ವೇ ನಂ.81/4 ರಲ್ಲಿ 9 ಗುಂಟೆ, ಸನಂ.80/3 ರಲ್ಲಿ 15 ಗುಂಟೆ ಎಂದು ನುಡಿಯುತ್ತಾರೆ. ತಾವು ದಾವಾ ಆಸ್ತಿಯ ಹಾಜು-ಬಾಜುದಾರರ ಎಂದರೆ ಸಾಕ್ಷಿ ದಾವಾ ಆಸ್ತಿಯ ಪೂರ್ವಕ್ಕೆ ನನಗೆ ಸೇರಿದ ಸನಂ. 79, 80 ಮತ್ತು 81 ಇದೆ ಎನ್ನುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿಯನ್ನು ತಾವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆ ನಂದಪ್ಪ ಅಲಿಯಾಸ್ ಕಿಟ್ಟಣ್ಣ ಎಂಬುವವರ ಜಮೀನು ಎಂದು ಬರೆಸಿದೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ನನಗೆ ಸೇರಿದ ಜಮೀನು ನಮೂದು ಮಾಡಿಸಿಲ್ಲ ಎಂದರೆ ಸರಿ. ದಾವಾ ಸರ್ವೇ ನಂಬರ್ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವ ಕೃಷಿ ಜಮೀನು ಇಲ್ಲ ಎಂದರೆ ಸರಿ. ದಾವಾ ಆಸ್ತಿಗಳನ್ನು ವಾದಿಯ ತಂದೆ ತಿಮ್ಮಬೋವಿರವರು ದಿ 02.04.1964ರಲ್ಲಿ 7 ಗುಂಟೆ ಮತ್ತು 04.01.1964ರಲ್ಲಿ 17 ಗುಂಟೆಯನ್ನು 1ನೇ ಪ್ರತಿವಾದಿಯ ತಂದೆ ಕರಿಗೌಡರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

2. ದಾವಾ ಆಸ್ತಿಯ ಸಂಪೂರ್ಣ ದಾಖಲೆಗಳನ್ನು ತಾವು ನೋಡಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿಯು ವಾದಿಯ ತಾಯಿಯ ಹೆಸರಿಗೆ ಆಗಿದ್ದ ಪೌತಿ ಖಾತೆಯನ್ನು ಪ್ರಶ್ನಿಸಿ ರಾಮನಗರ ಎಸಿ ನ್ಯಾಯಾಲಯದಲ್ಲಿ ಆರ್ ಎ 60/2017-18 ಎಂದು ಅಪೀಲು ಮಾಡಿದ್ದರು ಎಂದರೆ ಸರಿ. ದಿ 09.06.2017ರಂದು ವಾದಿಯ ತಾಯಿಗೆ ದಾವಾ ಆಸ್ತಿಯ ಖಾತೆ ಆಗಿದ್ದನ್ನು ರದ್ದು ಪಡಿಸಿ ಎಸಿ ರಾಮನಗರ ರವರು ಆದೇಶಿಸಿದ್ದಾರೆ ಎಂದರೆ ಸಾಕ್ಷಿ ಗಲಾಟೆ ಮಾಡಿ ರದ್ದು ಮಾಡಿಸಿದ್ದಾರೆ ಎನ್ನುತಾರೆ.

ತದನಂತರ ತಹಶೀಲ್ದಾರ್ ಚನ್ನಪಟ್ಟಣರವರ ಪ್ರಾಧಿಕಾರದಲ್ಲಿ ಕೇಸ್ ದಾಖಲು ಆಗಿತ್ತು ಎಂದರೆ ಸರಿ. ವಾದಿಯ ತಾಯಿಯ ಹೆಸರಿಗೆ ಆಗಿದ್ದ ಖಾತೆಯನ್ನು ದಿ 07.03.2018ರಂದು ರದ್ದು ಪಡಿಸಿ 1ನೇ ಪ್ರತಿವಾದಿಯ ಹೆಸರಿಗೆ ಖಾತೆ ದಾಖಲು ಮಾಡುವಂತೆ ಆದೇಶಿಸಿದ್ದರು ಎಂದರೆ ಸರಿಯಲ್ಲ. ಎಸಿ ಮತ್ತು ತಹಶೀಲ್ದಾರ್ ನ್ಯಾಯಾಲಯದಲ್ಲಿ ನಡೆದ ದಾವಾ ಆಸ್ತಿಯ ಸಂಬಂಧ ನಡೆದ ಕೇಸುಗಳ ಬಗ್ಗೆ ತಾವು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ದಿನಾಂಕ 05.07.2018ರಂದು ವಾದಿಯ ಕುಟುಂಬದವರು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದು ಸದರಿ ವಿಭಾಗ ಪತ್ರ ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ಎನ್ನುತ್ತಾರೆ. ವಿಭಾಗ ಪತ್ರ ಮಾಡಿಕೊಂಡ ಸಮಯಕ್ಕೆ ತಹಶೀಲ್ದಾರ್ ಚನ್ನಪಟ್ಟಣ ಮತ್ತು ಉಪವಿಭಾಗಾಧಿಕಾರಿರವರು ವಾದಿಯ ತಾಯಿ ಹೆಸರಿಗೆ ಇದ್ದ ಖಾತೆಯನ್ನು ರದ್ದು ಪಡಿಸಿ ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. 1964 ರಿಂದ 1ನೇ ಪ್ರತಿವಾದಿ ಮತ್ತು ಅವರ ಕುಟುಂಬಸ್ಥರೆ ದಾವಾ ಆಸ್ತಿಯ ಸ್ವಾಧೀನ ಮತ್ತು ಅನುಭೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ